KAGD410014612017

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ರೋಣ**

**ಉಪಸ್ಥಿತರುಃ-ಶ್ರೀ. ವಿಜಯಕುಮಾರ್ ಎನ್, ಬಿ.ಎ., ಎಲ್‌ಎಲ್.ಬಿ**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ರೋಣ.

**ದಿನಾಂಕ 17 ನೇ ಜೂನ್ ಮಾಹೆಯ 2026 ನೇ ಇಸವಿ**

**ಅಸಲು ದಾವೆ ಸಂಖ್ಯೆ 346/2017**

**ವಾದಿ** – **ನೀಲಪ್ಪ ತಂದೆ ಮೈಲಾರಪ್ಪ ಮಾಳಗೌಡ್ರ,**
ವಯಾಃ 41 ವರ್ಷ,ಉಃಆಟೋಚಾಲಕ,
ಸಾಃ ಹಿರೇಹಾಳ ಗ್ರಾಮ, ತಾಃರೋಣ,
ಜಿಲ್ಲಾಃಗದಗ.
ಹಾ/ವ 24 ನೇ ಕ್ರಾಸ್ ದೊಡ್ಡನಾಯಕನಕೊಪ್ಪ
ಬನಶ್ರೀ ನಗರ, ಧಾರವಾಡ, ತಾ/ಜಿಃಧಾರವಾಡ.
**(ವಾದಿಯರ ಪರ ಶ್ರೀ. ಎಸ್.ವಿ.ಸಿ., ವಕೀಲರು)**

ವಿರುದ್ಧ

**ಪ್ರತಿವಾದಿಗಳು** – 1) **ಚೇಳಪ್ಪ ತಂದೆ ಶ್ರೀಪಾದಪ್ಪ ರೋಖಡೇ,**
ವಯಾಃ 71 ವರ್ಷ, ಉಃ ಶೇತ್ಕಿ
ಸಾಃ ಹಿರೇಹಾಳ, ತಾಃ ರೋಣ, ಜಿಃ ಗದಗ.

2) **ಕುಶಮ್ಮವ್ವ ಗಂಡ ಚೇಳಪ್ಪ ರೋಖಡೇ,**
ವಯಾಃ 55 ವರ್ಷ ಉಃಮನೆಕೆಲಸ,
ಸಾಃ ಹಿರೇಹಾಳ, ತಾಃ ರೋಣ, ಜಿಃ ಗದಗ.
**( ಪ್ರತಿವಾದಿಗಳ ಪರ ಶ್ರೀ. ವಿ.ಎಸ್.ಬಿ., ವಕೀಲರು)**

| | | |
|---|---|---|
| ದಾವೆಯು ದಾಖಲಿಸಿದ ದಿನಾಂಕ | – | 04/11/2017 |
| ದಾವೆಯ ಸ್ವರೂಪ | – | ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ದಾವೆ. |
| ಸಾಕ್ಷಿಗಳ ವಿಚಾರಣೆ ಪ್ರಾರಂಭವಾದ ದಿನಾಂಕ | – | 16/02/2021 |
| ಸಾಕ್ಷಿಗಳ ವಿಚಾರಣೆ ಮುಕ್ತಾಯವಾದ ದಿನಾಂಕ | – | 08/07/2024 |
| ತೀರ್ಪು ನೀಡಿದ ದಿನಾಂಕ | – | 17/06/2026 |
| ಒಟ್ಟು ಅವಧಿ | – | ವರ್ಷ 08 ತಿಂಗಳು 07 ದಿನಗಳು 15 |

VIJAYKUMAR N

Digitally signed by VIJAYKUMAR N
Date: 2026.06.19 16:32:56 +0530

**ಹೆಚ್ಚುವರಿ ದಿವಾಣಿ ನ್ಯಾಯಧೀಶರು ಹಾಗೂ**

**ಜೆ.ಎಂ.ಎಫ್.ಸಿ., ರೋಣ.**

## <u>ತೀರ್ಪು</u>

ವಾದಿಯವರು ಪ್ರತಿವಾದಿಯವರ ವಿರುದ್ಧ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂಧಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ಹೂಡಿರುತ್ತಾರೆ.

**2. <u>ದಾವಾ ಆಸ್ತಿಯ ವರ್ಣನೆ</u> :**

ದಾವಾ ಆಸ್ತಿಯು ರೋಣ ತಾಲೂಕು ಹಿರೇಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸರ್ವೆನಂಬರ್ 443/7 ವಿಸ್ತೀರ್ಣ 02 ಗುಂಟೆಗಳು ದಾವಾ ಆಸ್ತಿಗಳಾಗಿರುತ್ತದೆ.

**3. <u>ವಾದಿಯವರ ವಾದಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ</u> :**

ವಾದಿಯವರು ತಮ್ಮ ವಾದ ಪತ್ರದಲ್ಲಿ ದಾವಾ ಅನೂಸೂಚಿ ಆಸ್ತಿಯು ಹಿರೇಹಾಳ ಗ್ರಾಮದಲ್ಲಿ ಇರುತ್ತದೆ. 1 ನೇ ಪ್ರತಿವಾದಿಯವರು ಮಾರಾಟ ಮಾಡುವ ಪೂರ್ವದಲ್ಲಿ ದಿನಾಂಕ 25.10.2010 ರಂದು ರೂ.1,000/- ತೆರಿಗೆಯನ್ನು ಗ್ರಾಮಂ ಪಂಚಾಯತಿ ಹಿರೇಹಾಳ ರವರಿಗೆ ಪಾವತಿಸಿ 2 ಗುಂಟೆ ಆಸ್ತಿಯನ್ನು ವಿಪಿಸಿ ನಂ.1445 ರಂತೆ ಪಂಚಾಯತಿಯ ದಾಖಲಾತಿಗಳಲ್ಲಿ 1 ನೇ ಪ್ರತಿವಾದಿಯವರ ಹೆಸರನ್ನು ದಾಖಲಿಸಿಕೊಂಡಿರುತ್ತಾರೆ. ವಾದಿಯವರು ಆಟೋಚಾಲಕರಾಗಿರುತ್ತಾರೆ. ಸದರಿ ಕೆಲಸದಲ್ಲಿ ಬಂದಂತಹ ಹಣವನ್ನು ಉಳಿಸಿಕೊಂಡು ದಿನಾಂಕ 25.02.2011 ರಂದು ರೂ.72,000/- ಗಳಿಗೆ ವಿಪಿಸಿ ನಂ.1445 ನ್ನು 1 ನೇ ಪ್ರತಿವಾದಿಯವರ ಹತ್ತಿರ ಖರೀದಿ ಮಾಡಿಕೊಂಡು ಮಾಲೀಕನಾಗಿದ್ದು, ಸ್ವಾಧೀನದಲ್ಲಿ ಇರುತ್ತೆನೆ. 2 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಯವರ ಕಾನೂನುಬದ್ದ ಹೆಂಡತಿಯಾಗಿರುತ್ತಾರೆ. 2 ನೇ ಪ್ರತಿವಾದಿಯವರು ವಾದಿಯವರಿಗೆ ಆಗದವರ ಮಾತನ್ನು ಕೇಳಿಕೊಂಡು ಪಹಣಿ ಪತ್ರಿಕೆಯಲ್ಲಿ 1 ನೇ ಪ್ರತಿವಾದಿಯವರ ಹೆಸರು ಇರುತ್ತದೆ ಎಂದು ದಿನಾಂಕ 25.10.2017 ರಂದು ಕಾನೂನುಬಾಹಿರವಾಗಿ ದಾವಾ ಆಸ್ತಿಯಲ್ಲಿ ಪ್ರವೇಶ ಮಾಡಿ ವಾದಿಯವರನ್ನು ಸ್ವಾಧೀನದಿಂದ

ಹೊರಹಾಕಲು ಪ್ರಯತ್ನಿಸಿರುತ್ತಾರೆ. ಸದರಿ ಆಸ್ತಿಯನ್ನು 1 ನೇ ಪ್ರತಿವಾದಿಯವರು ನೊಂದಣಿ ಖರೀದಿ ಪತ್ರದ ಮುಖಾಂತರ ತನಗೆ ಮಾರಾಟ ಮಾಡಿರುತ್ತಾರೆ. ಪ್ರತಿವಾದಿಯವರಿಗೆ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರು ಸಹ ವಾದಿಯವರ ಶಾಂತಿಯುತ ಸ್ವಾ ಧೀನಕ್ಕೆ ಅಡ್ಡಿಪಡಿಸಿರುತ್ತಾರೆ. ಹಾಗಾಗಿ ಪ್ರಸ್ತುತ ದಾವೆಯನ್ನು ದಾಖಲು ಮಾಡಿ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂದಕಾಜ್ಞೆಯನ್ನು ಪರಿಹಾರವನ್ನು ಕೇಳಿರುತ್ತೇನೆ ಎಂದು ಹೇಳಿರುತ್ತಾರೆ.

**4.** ವಾದಿಯವರು ಸಲ್ಲಿಸಿದ್ದ ವಾದ ಪತ್ರದ ಮೂಲಕ ಪ್ರತಿವಾದಿಯವರ ವಿರುದ್ಧ ದಾವೆಯನ್ನು ದಾಖಲು ಮಾಡಿಕೊಂಡು ಪ್ರತಿವಾದಿಯವರಿಗೆ ದಾವಾ ಸಮನ್ಸ್ ಖುದ್ದು ಜಾರಿಯಾಗಿರುತ್ತದೆ. ಅದರ ಪ್ರಕಾರವಾಗಿ 1 ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. 2 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಯವರ ಪ್ರತಿವಾದ ಪತ್ರವನ್ನು ತಮ್ಮ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

**5.** 1 ನೇ ಪ್ರತಿವಾದಿಯವರು ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ಮುಂದುವರಿದು ವಾದಿಯವರು ಎಂದು ಹಿರೇಹಾಳ ಗ್ರಾಮದ ನಿವಾಸಿಯಾಗಿರುವುದಿಲ್ಲ. ಪ್ರತಿವಾದಿಯು ಬೋಳೆ ಸ್ವಭಾವದವರಾಗಿದ್ದು, ಸರಿ ತಪ್ಪು ತಿಳಿಯದಂತ ವ್ಯಕ್ತಿಯಾಗಿರುತ್ತಾರೆ. ಅದರ ದುರುಪಯೋಗ ಪಡಿಸಿಕೊಂಡು ವಾದಿಯು ಅಕ್ರಮ ಲಾಭ ಸಂಪಾದಿಸಲು ಸುಮಾರು 10 ಲಕ್ಷ ಬೆಲೆಬಾಳುವ ಆಸ್ತಿಯನ್ನು ಎತ್ತಿಹಾಕಲು ಮತ್ತು ಪ್ರತಿವಾದಿಗೆ ಯಾವುದೇ ಹಣ ಸಂದಾಯ ಮಾಡದೆ ನಕಲಿ ಪಂಚಾಯತಿ ದಾಖಲೆ

ಸೃಷ್ಟಿಸಿಕೊಂಡು ಪ್ರತಿವಾದಿಗೆ ತಿಳಿಯದಂತೆ ಮತ್ತು ಆತನ ಹಿಂದಿನಿಂದ ಖರೀದಿ ಪತ್ರ ನೋಂದಾಯಿಸಿಕೊಂಡಿರುತ್ತಾರೆ. ಸದರಿ ಪತ್ರ ಕಾನೂನುಬಾರವಾಗಿರುತ್ತದೆ. ಅದು ಪ್ರತಿವಾದಿಯ ಮಾಲೀಕತ್ವದ ಅಸ್ತಿಗೆ ಯಾವುದೇ ಬಂಧನಕಾರಿಯಾಗುವುದಿಲ್ಲ ಮತ್ತು ವಾದಿಯು ಮಾಲೀಕನಾಗಿರುವುದಿಲ್ಲ. ವಾದಿಯು ಈ ದಾವೆಯನ್ನು ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂಧಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿದ್ದು, ದಾವಾ ಆಸ್ತಿಗೆ 1 ಮತ್ತು 2 ನೇ ಪ್ರತಿವಾದಿಯವರು ಹಾಗೂ ಅವರ ಮಕ್ಕಳು ಸಹ ಈ ದಾವೆಗೆ ಅವಶ್ಯಕ ಪಕ್ಷಗಾರರಾಗಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಯವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರಾನ್ನಗಿ ಮಾಡದ ಹೊರತು ಈ ದಾವೆಯು ಕಾನೂನಿಂದ ಕೂಡಿರುವುದಿಲ್ಲ. ಸದರಿ ದಾವೆಗೆ ಅವಶ್ಯಕ ಪಕ್ಷಗಾರರ ಭಾದೆಗೆ ಒಳಪಟ್ಟಿರುತ್ತದೆ. ವಾದಿಯು ತನ್ನ ವಿನಂತಿಯಲ್ಲಿ ನೋಂದಾಯಿತ ಖರೀದಿ ಪತ್ರದ ಪ್ರಕಾರ ಮಾಲೀಕತ್ವದ ಹಕ್ಕನ್ನು ಕೇಳುತ್ತಿದ್ದು, ಖರೀದಿ ಪತ್ರವು ಶೇತ್ಕಿ ಜಮೀನಿನ ಖರೀದಿ ಪತ್ರವಾಗಿರದೆ ಅದು ಬೀನ್ ಶೇತ್ಕಿ ಆಸ್ತಿಯ ಖರೀದಿ ಪತ್ರವಾಗಿರುವುದರಿಂದ ಸದರಿ ಖರೀದಿ ಪತ್ರ ರೂ.72,000/- ಮೌಲ್ಯ ಇದ್ದು, ಸದರಿ ಮೌಲ್ಯದ ಮೇಲೆ ಮತ್ತು ಈಗಿನ ಮಾರುಕಟ್ಟೆ ಮೌಲ್ಯದ ಮೇಲೆ ಕೆ.ಸಿ.ಎಫ್ ಮತ್ತು ಎಸ್.ವಿ. ಕಾಯ್ದೆಯ ಕಲಂ. 24 ರ ಕೆಳಗೆ ನಿಗದಿತ ನ್ಯಾಯಾಲಯದ ವೆಚ್ಚವನ್ನು ಭರಿಸದ ಹೊರತು ಈ ದಾವೆಯನ್ನು ನಿರ್ಣಯ ಮಾಡಲು ಬರುವುದಿಲ್ಲ. ವಾದಿಯು ನ್ಯಾಯಾಲಯದ

ಶುಲ್ಕವನ್ನು ಸರಿಯಾಗಿ ಕಟ್ಟಿರುವುದಿಲ್ಲ. ಆದ್ದರಿಂದ ವಾದಿಯ ಈ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

**6.** ವಾದ ಪತ್ರ ಮತ್ತು ಪ್ರತಿವಾದ ಪತ್ರವನ್ನು ಪರಿಶೀಲಿಸಿ ಹಿಂದಿನ ಅಧಿಕಾರಿಗಳು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತಾರೆ.

## ISSUES

1. Whether the plaintiff proves that, the suit schedule property bearing Sy.No.443/7 and VPC No.1445 of Hirehal village are one and the same?
2. Whether the plaintiff proves that, he is the absolute owner in possession of the suit schedule property as per register sale deed dated 25.02.2011?
3. Whether the plaintiff proves the alleged interference by the defendants?
4. Whether the plaintiff is entitled for the relief of declaration and permanent injunction as claimed?
5. What order or decree?

## ವಿವಾದಾಂಶಗಳು

1. ವಾದಿಯವರು ಹಿರೇಹಾಳ ಗ್ರಾಮದ ದಾವಾ ಅನುಸೂಚಿ ಆಸ್ತಿಯ ಸರ್ವೆನಂ.443/7 ಮತ್ತು ವಿಪಿಸಿ ನಂ.1445 ಒಂದೇಯಾಗಿರುತ್ತವೆ ಎಂದು ಆಸ್ತಿಯ ಸಂಪೂರ್ಣ ಮಾಲೀಕರಾಗಿದ್ದುಕೊಂಡು ಸ್ವಾಧೀನದಲ್ಲಿ ಇರುತ್ತೇವೆ ಎಂದು ಸಾಬೀತುಪಡಿಸುತ್ತಾರೆಯೇ?

2. ದಿನಾಂಕ 25.02.2011 ರ ನೊಂದಣಿ ಖರೀದಿ ಪತ್ರದ ಆಧಾರದ ಮೇಲೇ ಮಾಲೀಕರಾಗಿದ್ದುಕೊಂಡು ಸ್ವಾಧೀನದಲ್ಲಿ ಇರುತ್ತೇನೆಂದು ವಾದಿಯವರು ಸಾಬೀತುಪಡಿಸುತ್ತಾರೇಯೇ?

3. ಪ್ರತಿವಾದಿಯವರು ವಾದಿಯವರ ಶಾಂತಿಯುತ ಸ್ವಾಧೀನಕ್ಕೆ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ವಾದಿಯವರು ಸಾಬೀತುಪಡಿಸುತ್ತಾರೇಯೇ?

4. ವಾದಿಯವರು ತಮ್ಮ ವಾದ ಪತ್ರದಲ್ಲಿ ಕೇಳಿದಂತೆ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಪಡೆದುಕೊಳ್ಳಲು ಅರ್ಹರೇ?

5. ಯಾವ ಆದೇಶ ಅಥವಾ ಯಾವ ಡಿಕ್ರಿ ?

**7.** ವಾದಿಯು ತಮ್ಮ ದಾವೆಯನ್ನು ಸಾಬೀತುಪಡಿಸಲು ತನ್ನನ್ನು ತಾನು ವಾದಿ ಸಾಕ್ಷಿ 1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ ಹಾಗೂ ತಮ್ಮ ಪರವಾಗಿ 3 ಜನ ಸಾಕ್ಷಿದಾರರನ್ನು ವಾದಿಯು ತನ್ನ ಮುಖ್ಯ ವಿಚಾರಣೆಯ ಬದಲಿಗೆ ಸಾಕ್ಷ್ಯಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ದಾಖಲಾತಿಗಳನ್ನು ಹಾಜರುಪಡಿಸಿದ್ದು.

ಅವುಗಳನ್ನು ನಿಪಿ 1 ರಿಂದ 20 ಎಂದು ಗುರುತಿಸಿಕೊಂಡಿರುತ್ತಾರೆ. 2 ನೇ ಪ್ರತಿವಾದಿಯ ತನ್ನನ್ನು ತಾನು ಪ್ರತಿವಾದಿ ಸಾಕ್ಷಿ 1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. 2 ನೇ ಪ್ರತಿವಾದಿಯು ತನ್ನ ಮುಖ್ಯ ವಿಚಾರಣೆಯ ಬದಲಿಗೆ ಸಾಕ್ಷ್ಯಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಹಾಗೂ ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

**8.** ವಾದಿ ಮತ್ತು ಪ್ರತಿವಾದಿಯವರು ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

**9.** ವಾದಿ ಮತ್ತು ಪ್ರತಿವಾದಿ ಹಾಜರುಪಡಿಸಿದ ವಾದಪತ್ರ ಮತ್ತು ವಿಚಾರಣೆಗೆ ಹಾಜರುಪಡಿಸಿದ ಸಾಕ್ಷ್ಯದಾರರನ್ನು ಮತ್ತು ಗುರುತಿಸಿಕೊಂಡ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಈ ಮೇಲ್ಕಂಡ ವಿವಾದಾಂಶಗಳನ್ನು ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ.

**ವಿವಾದಾಂಶ ಸಂಖ್ಯೆ 1 : ಸಕಾರಾತ್ಮಕವಾಗಿ**

**ವಿವಾದಾಂಶ ಸಂಖ್ಯೆ 2 : ಸಕಾರಾತ್ಮಕವಾಗಿ**

**ವಿವಾದಾಂಶ ಸಂಖ್ಯೆ 3 : ಸಕಾರಾತ್ಮಕವಾಗಿ**

**ವಿವಾದಾಂಶ ಸಂಖ್ಯೆ 4 : ಸಕಾರಾತ್ಮಕವಾಗಿ**

**ವಿವಾದಾಂಶ ಸಂಖ್ಯೆ 5 : ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ.**

## **ಕಾರಣಗಳು**

**10.** **ವಿವಾದಾಂಶ ಸಂಖ್ಯೆ 1 ಮತ್ತು 2ಃ**-1 ಮತ್ತು 2 ನೇ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಸಾಕ್ಷ್ಯಗಳು ಪುನಃ ಪುನರಾವರ್ತನೆಯಾಗುವುದರಿಂದ 1 ಮತ್ತು 2 ನೇ ವಿವಾದಾಂಶಗಳನ್ನು ಒಟ್ಟಿಗೆ ಚರ್ಚೆಗೆ ತಗೆದುಕೊಳ್ಳುತ್ತಿದ್ದೇನೆ.

**11.** ಪ್ರಸ್ತುತ ವಿವಾದಾಂಶಗಳಿಗೆ ಸಂಬಂಧಿಸಿದಂತೆ ವಾದಿಯವರು ತಮ್ಮ ವಾದ ಪತ್ರದಲ್ಲಿ 1 ನೇ ಪ್ರತಿವಾದಿಯವರು ಸರ್ವೆನಂಬರ್ 443/7 ರಲ್ಲಿ 2 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರದ ಆಧಾರದ ಮೇಲೆ ರೂ.1000/- ಗಳನ್ನು ಗ್ರಾಮ ಪಂಚಾಯತಿ ಹಿರೇಹಾಳರವರಲ್ಲಿ ಪಾವತಿಸಿ ವಿಪಿಸಿ ನಂ.1445 ರಂತೆ ಪರಿವರ್ತನೆಯನ್ನು ಮಾಡಿಕೊಂಡಿರುತ್ತಾರೆ. ನಂತರ ದಿನಾಂಕ 25.02.2011 ರಂದು 1 ನೇ ಪ್ರತಿವಾದಿಯವರು ರೂ.72,000/- ಗಳಿಗೆ ತನ್ನ ಹೆಸರಿಗೆ ಖರೀದಿ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನಮೂದಿಸಿರುತ್ತಾರೆ. ಅದೇ ರೀತಿಯಾಗಿ 1 ನೇ ಪ್ರತಿವಾದಿಯವರು ಪ್ರತಿವಾದ ಪತ್ರವನ್ನು ಸಲ್ಲಿಸಿ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿದ್ದು, ಸದರಿ ಖರೀದಿ ಪತ್ರವನ್ನು ವಾದಿಯವರು ಸೃಷ್ಟಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ವಾದಿಯವರು ವಿವಾದಾಂಶ ಸಂಖ್ಯೆ 1 ಮತ್ತು 2 ರಲ್ಲಿ ಹೇಳಿರುವ ಸಂಗತಿಗಳನ್ನು ಸಾಬೀತುಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ವಾದಿಯವರು

ಸದರಿ ಸಂಗತಿಗಳನ್ನು ಸಾಬೀತುಪಡಿಸುವ ಉದ್ದೇಶದಿಂದ ವಾದಿ ಸಾಕ್ಷಿ 1 ರಿಂದ 4 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ತಮ್ಮ ಮೌಖಿಕ ಸಾಕ್ಷ್ಯದ ಸರ್ಮಥನೆಗಾಗಿ ನಿಪಿ.1 ರಿಂದ 20 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

**12.** ವಾದಿಯವರು ಪ್ರಸ್ತುತ ವಿವಾದಾಂಶಗಳನ್ನು ಸಾಬೀತುಪಡಿಸುವ ಉದ್ದೇಶದಿಂದ ನಿಪಿ.1 ರಿಂದ 20 ದಾಖಲಾತಿಗಳನ್ನು ಗುರುತಿಸಿಕೊಂಡಿದ್ದು, ಸದರಿ ದಾಖಲಾತಿಗಳ ಪೈಕಿ ನಿಪಿ.1 2010-11 ನೇ ಸಾಲಿನ ವಿಪಿಸಿ ನಂ.1445 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿ, ನಿಪಿ.2 ದಿನಾಂಕ 25.02.2011 ರಂದು ವಿಪಿಸಿ ನಂ.1445 ಕ್ಕೆ ಸಂಬಂಧಿಸಿದ ನೊಂದಣಿ ಖರೀದಿ ಪತ್ರ, ನಿಪಿ.3 ನಮೂನೆ 15, ನಿಪಿ.4 ಮತ್ತು 5 ನೊಂದಣಿ ಹಾಗೂ ಮುದ್ರಾಂಕ ಶುಲ್ಕವನ್ನು ಪಾವತಿಸಿರುವ ರಶೀದಿ ಮತ್ತು ಪ್ರಮಾಣ ಪತ್ರ, ನಿಪಿ.6 ನಮೂನೆ 15, ನಿಪಿ.7 ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಿದ ಅರ್ಜಿ, ನಿಪಿ.8 ರಿಂದ 10 ವಿಪಿಸಿ ನಂ.1445 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಗಳು, ನಿಪಿ.11 ರಿಂದ 15 ವಿಪಿಸಿ ನಂ.1445 ಕ್ಕೆ ಸಂಬಂಧಿಸಿದ ತೆರಿಗೆ ರಶೀದಿಗಳು, ನಿಪಿ.16 ಮತ್ತು 17 ಗ್ರಾಮ ಪಂಚಾಯತಿ ಹಿರೇಹಾಳ ರವರು ತೆಗೆದುಕೊಂಡಂತಹ ತೀರ್ಮಾನಗಳು, ನಿಪಿ.18 ಸರ್ವೆನಂಬರ್ 443/7 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆ, ನಿಪಿ.19 ವಿಪಿಸಿ ನಂ.1445 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿ, ನಿಪಿ.20 ದಿನಾಂಕ 28.07.2006 ರಂದು ಸರ್ವೆನಂ.443 ರ 4 ಎಕರೆ 11 ಗುಂಟೆ

ಜಮೀನಿನ ಪೈಕಿ 2 ಗುಂಟೆ ಜಮೀನಿಗೆ ಆದಂತಹ ಖರೀದಿ ಪತ್ರವಾಗಿರುತ್ತದೆ. ಪ್ರತಿವಾದಿಯವರು ತಮ್ಮ ಪರವಾಗಿ ಪ್ರತಿವಾದಿ ಸಾಕ್ಷಿ 1 ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

**13.** ಸದರಿ ವಿವಾದಾಂಶಗಳಿಗೆ ಸಂಬಂಧಿಸಿದಂತೆ ವಾದಿಯವರು ವಾದಿ ಸಾಕ್ಷಿ 1 ರವರು ವಿಚಾರಣೆಗೆ ಒಳಪಡಿಸಿಕೊಂಡಿದ್ದು ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನೆ ಪುನರುಚ್ಚರಿಸಿರುತ್ತಾರೆ. ಅದೇ ರೀತಿಯಾಗಿ 2 ನೇ ಪ್ರತಿವಾದಿಯವರು ಪ್ರತಿವಾದಿ ಸಾಕ್ಷಿ 1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಅವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸರ್ವೆನಂ. 443/7 ವಿಸ್ತೀರ್ಣ 2 ಗುಂಟೆ ಜಮೀನಿಗೆ 1 ನೇ ಪ್ರತಿವಾದಿಯು ಸಂಪೂರ್ಣ ಮಾಲೀಕನಾಗಿದ್ದುಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಹಾಗೂ ವಾದಿಯವರು ಹೇಳುವಂತೆ ದಾವಾ ಆಸ್ತಿಯನ್ನು ರೂ.72,000/- ಗಳಿಗೆ ದಿನಾಂಕ 25.11.2011 ರಂದು ನೊಂದಣಿ ಖರೀದಿ ಪತ್ರದ ಮುಖಾಂತರ ಖರೀದಿಸಿ ಮಾಲೀಕನಾಗಿದ್ದುಕೊಂಡು ಸ್ವಾಧಿನದಲ್ಲಿ ಇರುತ್ತೇನೆ ಎನ್ನುವ ಸಂಗತಿ ಸಂಪೂರ್ಣವಾಗಿ ಸುಳ್ಳು ಇರುತ್ತದೆ. ವಾದಿಯವರು ನೊಂದಣಿ ಅಧಿಕಾರಿಗಳೊಂದಿಗೆ ಸೇರಿಕೊಂಡು ಖರೀದಿ ಪತ್ರವನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಪ್ರತಿವಾದಿ ಸಾಕ್ಷಿ 1 ರವರು ತಮ್ಮ ಪಾಟೀ ಸವಾಲಿನಲ್ಲಿ **ವಿಪಿಸಿ ನಂ.1445 ನ್ನು 1 ನೇ ಪ್ರತಿವಾದಿಯು ವಿರುಪಾಕ್ಷಯ್ಯ ಮಲ್ಲಯ್ಯ**

**ಹಿರೇಮಠ ರವರಿಂದ ಖರೀದಿ ಮಾಡಿದ್ದರು ಎಂದರೆ ನಿಜ. ಸುಮಾರು 20 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರವನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ನೋಡಿ ಸದರಿ ಖರೀದಿ ಪತ್ರವನ್ನು ಒಪ್ಪಿಕೊಂಡಿರುತ್ತಾರೆ. ಹಾಗಾಗಿ ಸದರಿ ಖರೀದಿ ಪತ್ರವನ್ನು ನಿಪಿ.20 ರಂತೆ ಗುರುತಿಸಿರುತ್ತಾರೆ. 1 ನೇ ಪ್ರತಿವಾದಿಯು ಆ ಸಮಯದಲ್ಲಿ ಸರ್ವೆನಂ.443 ರಲ್ಲಿ 2 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ನಿಜ. ನಂತರ ವಿಪಿಸಿ ನಂ.1445 ಆಯಿತು ಎಂದರೆ ನಿಜ. ವಿಪಿಸಿ ನಂ.1445 ರ ಚಕ್ಕುಬಂದಿ ತನಗೆ ಹೇಳಲು ಬರುವುದಿಲ್ಲ. ಖರೀದಿ ಸಮಯದಲ್ಲಿ 2 ಗುಂಟೆಯ ಸುತ್ತಲು ಹೊಲಗಳು ಇದ್ದವು ಎಂದರೆ ನಿಜ. ವಿಪಿಸಿ ನಂ. ಆದ ನಂತರ ಚಕ್ಕುಬಂದಿ ಬೇರೆ ಆಯಿತು ಎಂದರೆ ನಿಜ. ವಿಪಿಸಿ ನಂ.1445 ರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಅರವಿಂದ ರಾಮಚಂದ್ರಪ್ಪ ಶಾಂತಗೇರಿ ರವರ ಖಾಲಿ ಜಾಗ, ಉತ್ತರಕ್ಕೆ ಕಲ್ಲಪ್ಪ ಬಸಪ್ಪ ಜಾಲಿಹಾಳ ರವರ ಮನೆ, ದಕ್ಷಿಣಕ್ಕೆ ಸರಕಾರಿ ರಸ್ತೆ ಇರುತ್ತದೆ ಎಂದರೆ ನಿಜ. ವಿಪಿಸಿ ನಂ.1445 ತನ್ನ ಗಂಡನ ಸ್ವಂತಃ ಆಸ್ತಿ ಎಂದರೆ ನಿಜ ಎಂದು ನುಡಿದಿರುತ್ತಾರೆ.** ಸದರಿ ಸಂಗತಿಗಳನ್ನು ಗಮನಿಸಿದಾಗ ನಿಪಿ.20 ರಲ್ಲಿರುವ ಸರ್ವೆನಂ.443 ವಿಸ್ತೀರ್ಣ 2 ಗುಂಟೆಗೆ ಆದಂತಹ ಖರೀದಿ ಪತ್ರ ಮತ್ತು ವಿಪಿಸಿ ನಂ.1445 ಒಂದೇ ಆಗಿರುತ್ತದೆ ಎಂದು 2 ನೇ ಪ್ರತಿವಾದಿಯವರು ಒಪ್ಪಿಕೊಂಡಿರುತ್ತಾರೆ. ಹಾಗಾಗಿ ಒಪ್ಪಿಕೊಂಡ ಸಂಗತಿಗಳನ್ನು ಸಾಬೀತುಪಡಿಸುವ ಅವಶ್ಯಕತೆ ಇರುವುದಿಲ್ಲ.

**14.** ಸದರಿ ವಿವಾದಾಂಶ ಸಂಖ್ಯೆ 2 ಕ್ಕೆ ಸಂಬಂಧಿಸಿದಂತೆ ವಾದಿಯವರು ವಿಪಿಸಿ ನಂ.1445 ರ ಮಾಲೀಕನಾಗಿದ್ದುಕೊಂಡು ಸ್ವಾಧೀನದಲ್ಲಿ ಇರುತ್ತೆನೆ ಎಂದು ಹೇಳಿರುತ್ತಾರೆ. ಸದರಿ ಸಂಗತಿಯನ್ನು ಸಾಬೀತುಪಡಿಸಲು ನಿಪಿ.2 ರಂತೆ ನೊಂದಣಿ ಖರೀದಿ ಪತ್ರವನ್ನು ಹಾಜರುಪಡಿಸಿರುತ್ತಾರೆ. ಸದರಿ ಖರೀದಿ ಪತ್ರದಲ್ಲಿ ದಿನಾಂಕ 25.02.2011 ರಂದು ನೀಲಪ್ಪ ತಂದೆ ಮೈಲಾರಪ್ಪ ಮಲ್ಲಗೌಡ್ರ ರವರಿಗೆ ಚೇಳಪ್ಪ ತಂದೆ ಶ್ರೀಪಾದಪ್ಪ ರೋಖಡೆ ರವರು ಹಿರೇಹಾಳ ಗ್ರಾಮದ ವಿಪಿಸಿ ನಂ.1445 ಕ್ಕೆ ಸಂಬಂಧಿಸಿದಂತೆ ಖರೀದಿ ಪತ್ರವನ್ನು ಬರೆದುಕೊಟ್ಟಿರುವುದು ಆಗಿರುತ್ತದೆ. ಪ್ರತಿವಾದಿಯವರು ಸದರಿ ಖರೀದಿ ಪತ್ರವು ನಕಲಿಯಾಗಿರುತ್ತದೆ ಎಂದು ಹೇಳಿರುತ್ತಾರೆ. ಸದರಿ ಸಂಗತಿಯನ್ನು ಸಾಬೀತುಪಡಿಸಲು ಪ್ರತಿವಾದಿಯವರು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ನಿಪಿ.2 ರಲ್ಲಿ 1 ನೇ ಪ್ರತಿವಾದಿಯವರು ಮಾಡಿರುವ ಸಹಿಗೂ ನಿಪಿ.20 ರಲ್ಲಿ ಮಾಡಿರುವ ಸಹಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಮೇಲ್ನೋಟಕ್ಕೆ ಎರಡು ಸಹಿಗಳು ಒಂದೇ ಆಗಿರುತ್ತವೆ. ಹಾಗೆಯೇ ನಿಪಿ.2 ಮತ್ತು ನಿಪಿ.20 ಎರಡು ಖರೀದಿ ಪತ್ರಗಳಲ್ಲಿಯು 1 ನೇ ಪ್ರತಿವಾದಿಯವರ ಪೋಟೋ ಇದ್ದು, ಅವರು 1 ನೇ ಪ್ರತಿವಾದಿಯಾಗಿರುತ್ತಾರೆ ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಪ್ರತಿವಾದಿ ಸಾಕ್ಷಿ 1 ರವರು 1 ನೇ ಪ್ರತಿವಾದಿಯವರ ಹೆಂಡತಿಯಾಗಿದ್ದು, ಅವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕ 28.07.2006 ರಂದು ನಿಪಿ.20 ರಂತೆ ಖರೀದಿ ಪತ್ರವಾಗಿರುವುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಹಾಗೆಯೇ

ವಾದಿಯವರು ನಿಪಿ.6 ಋಣಬಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿಯು ಸಹ ಬರೆದುಕೊಟ್ಟವರು ಚೇಳಪ್ಪ ಶ್ರೀಪಾದಪ್ಪ ರೋಖಡೆ ಎಂದು ಮತ್ತು ಬರೆಯಿಸಿಕೊಂಡವರು ನೀಲಪ್ಪ ಮೈಲಾರಪ್ಪ ಮಲಗೌಡ್ರ ಎಂದು ವಾದಿಯವರ ಹೆಸರು ನಮೂದು ಆಗಿರುತ್ತದೆ. ಹಾಗೆಯೇ ನಿಪಿ.8 ರಿಂದ 15 ರ ವರೆಗಿನ ದಾಖಲಾತಿಗಳಲ್ಲಿಯು ಸಹ ವಾದಿಯವರ ಹೆಸರು ನಮೂದು ಆಗಿರುತ್ತದೆ. ಸದರಿ ನಿಪಿ.8 ರಿಂದ 15 ಮತ್ತು 19 ದಾಖಲಾತಿಗಳು ವಿಪಿಸಿ ನಂ.1445 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಗಳು ಮತ್ತು ತೆರಿಗೆ ರಶೀದಿಗಳು ಆಗಿರುತ್ತವೆ. ನಿಪಿ.18 ರಂತೆ ಸರ್ವೇನಂ.443/7 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ಪಹಣಿ ಪತ್ರಿಕೆಯು ಪ್ರತಿವಾದಿಯವರ ಹೆಸರಿನಲ್ಲಿ ಇದ್ದು, ಸದರಿ ಪಹಣಿ ಪತ್ರಿಕೆಯ ಬಗ್ಗೆ ಈಗಾಗಲೇ ಪ್ರತಿವಾದಿ ಸಾಕ್ಷ್ಯ 1 ರವರು ಒಪ್ಪಿಕೊಂಡಿರುತ್ತಾರೆ. ಹಾಗಾಗಿ ಸದರಿ ಪಹಣಿ ಪತ್ರಿಕೆಯ ಬಗ್ಗೆ ಯಾವುದೇ ಚರ್ಚೆ ಇರುವುದಿಲ್ಲ. ಪ್ರತಿವಾದಿ ಪರ ವಕೀಲರು ತಮ್ಮ ಮೌಖಿಕ ವಾದದಲ್ಲಿ ಸರಿಯಾಗಿ ನ್ಯಾಯಾಲಯದ ಶುಲ್ಕವನ್ನು ಪಾವತಿಸಿರುವುದಿಲ್ಲ ಮತ್ತು ಸದರಿ ಆಸ್ತಿಯು ರೂ.10 ಲಕ್ಷಕ್ಕಿಂತ ಮೇಲ್ಪಟ್ಟು ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ಸಂಗತಿಗಳಿಗೆ ಸಂಬಂಧಿಟಿಸಿದಂತೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಹಾಗೆಯೇ ಪ್ರತಿವಾದಿ ಸಾಕ್ಷಿ 1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾವು ಸದರಿ ಆಸ್ತಿಗೆ ಸಂಬಂಧಿಸಿದಂತೆ 2011 ಕ್ಕಿಂತ ಮುಂಚಿತವಾಗಿ ಯಾವುದೇ ತೆರಿಗೆಯನ್ನು ಪಾವತಿಸಿರುವುದಿಲ್ಲ. 2011 ರ

ಫೆಬ್ರವರಿಯ ನಂತರದಲ್ಲಿ ವಾದಿಯ ಹೆಸರಿನಲ್ಲಿ ಉತಾರ ಆಗಿದೆ ಎಂದರೆ ಸಾಕ್ಷಿಯು ನಂತರದಲ್ಲಿ ಮಾಡಿಕೊಂಡಿದ್ದಾರೆ ಎಂದು ಹೇಳಿರುತ್ತಾರೆ. 2020 ರಲ್ಲಿ ಈ ವಿಚಾರ ತನಗೆ ತಿಳಿದಿರುತ್ತದೆ. ಆಗ ತಾನು ತೆರಿಗೆ ತುಂಬಲು ಹೋಗಿದ್ದೆ, ತಾನು ಮತ್ತು ತನ್ನ ಗಂಡ ಈ ವಿಚಾರ ಗೋತ್ತಾದ ಮೇಲೆ ಖರೀದಿ ಪತ್ರದ ವ್ಯವಹಾರದ ಬಗ್ಗೆ ಪಂಚಾಯತಿಯ ಅಧಿಕಾರಿಗಳ ವಿರುದ್ಧ ದೂರನ್ನು ನೀಡಿರುವುದಿಲ್ಲ. ವಾದಿಯು ಸದರಿ ಆಸ್ತಿಗೆ ತೆರಿಗೆಯನ್ನು ಪಾವತಿಸಿರುತ್ತಾರೆ ಎಂದರೆ ಇರಬಹುದು ಎಂದು ನುಡಿದಿರುತ್ತಾರೆ. ಸದರಿ ಸಂಗತಿಗಳನ್ನು ಗಮನಿಸಿದಾಗ ವಾದಿಯವರು ದಾವಾ ಆಸ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಯವರ ಹತ್ತಿರ ನೊಂದಣಿ ಖರೀದಿ ಪತ್ರದ ಆಧಾರದ ಮೇಲೆ ಮಾಲೀಕರಾಗಿರುತ್ತಾರೆ ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

**15.** ಪ್ರಸ್ತುತ ವಿವಾದಾಂಶಗಳಿಗೆ ಸಂಬಂಧಿಸಿದಂತೆ ವಾದಿ ಸಾಕ್ಷ್ಯ 2 ಮತ್ತು 4 ರವರನ್ನು ಪಾಟೀಸವಾಲಿಗೆ ಒಳಪಡಿಸಿದ್ದು, ವಾದಿ ಸಾಕ್ಷ್ಯ 2 ಮತ್ತು 4 ರವರು ತಮ್ಮ ಪಾಟೀ ಸವಾಲಿನಲ್ಲಿ ಪ್ರತಿವಾದಿ ಪರ ವಕೀಲರು ಕೇಳಿದ ಪ್ರಶ್ನೆಗೆ ವಾದಿಯವರು ಸುಮಾರು 15–20 ವರ್ಷಕ್ಕಿಂತ ಹೆಚ್ಚಿಗೆ ಧಾರವಾದಡಲ್ಲಿ ಇದ್ದರು. ವಾದಿಯವರು ಹಿರೇಹಾಳದಲ್ಲಿ ವಾಸವಾಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿಯಾಗಿ ವಾದಿ ಸಾಕ್ಷ್ಯ 4 ರವರು ಪಾಟೀ ಸವಾಲಿನಲ್ಲಿ ವಾದಿಯವರು ಶಾಶ್ವತವಾಗಿ ಧಾರವಾಡದಲ್ಲಿ 20 ವರ್ಷಗಳಿಂದ ವಾಸವಾಗಿದ್ದಾರೆ ಎಂದರೆ ನಿಜ. ವಾದಿಯು ಹಿರೇಹಾಳದಲ್ಲಿ ವಾಸವಾಗಿರುವುದಿಲ್ಲ ಎಂದರೆ ನಿಜ ಎಂದು

ನುಡಿದಿರುತ್ತಾರೆ. ಸದರಿ ಸಂಗತಿಗೆ ಸಂಬಂಧಿಸಿದಂತೆ ವಾದಿ ಸಾಕ್ಷಿ 1 ರವರಿಗೆ ಪ್ರತಿವಾದಿ ಪರ ವಕೀಲರು ದಾವಾ ಆಸ್ತಿಯ ಸ್ವಾಧೀನದಲ್ಲಿ ಎಂದಿಗೂ ಸಹ ಇರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಹಾಗೆಯೇ 1 ನೇ ಪ್ರತಿವಾದಿಯವರು ನವಲಗುಂದದಲ್ಲಿ ವಾಸವಾಗಿರುತ್ತಾರೆ. ತಾನು ಧಾರವಾಡದಲ್ಲಿ ವಾಸವಾಗಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ಸಂಗತಿಗಳಿಗೆ ಸಂಬಂಧಿಸಿದಂತೆ ವಾದಿಯವರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ತೋರಿಸಲು ಪ್ರತಿವಾದಿಯವರು ಪ್ರಯತ್ನಿಸಿರುತ್ತಾರೆ. ಆದರೆ ವಾದಿ ಸಾಕ್ಷಿ 4 ರವರಿಗೆ ಪ್ರತಿವಾದಿಯವರೇ ಪಾಟೀ ಸವಾಲಿನಲ್ಲಿ ತಾನು ಹಿರೇಹಾಳ ಗ್ರಾಮಕ್ಕೆ ಹೋಗಿಲ್ಲ, ಆಸ್ತಿಯನ್ನು ನೋಡಿಲ್ಲ, ತನಗೆ ಏನು ಗೊತ್ತಿಲ್ಲಾ ಎಂದು ಪ್ರಶ್ನೆಯನ್ನು ಸೂಚಿಸಿರುತ್ತಾರೆ. ಸದರಿ ಸಂಗತಿಗಳನ್ನು ಗಮನಿಸಿದಾಗ ಪ್ರತಿವಾದಿಯವರು ಖರೀದಿ ಪತ್ರವನ್ನು ಬರೆದುಕೊಟ್ಟು ತಾವು ಯಾವ ತರಹದ ರಕ್ಷಣೆಯನ್ನು ಪಡೆದುಕೊಳ್ಳಬೇಕು ಎನ್ನುವ ಪ್ರಯತ್ನದಲ್ಲಿ ಇರುತ್ತಾರೆ ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಿಪಿ.2 ಖರೀದಿ ಪತ್ರದಲ್ಲಿ ಖರೀದಿಯನ್ನು ನೀಡಿದ ದಿನದಂದೇ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತೇವೆ ಎಂದು ನಮೂದಿಸಿರುತ್ತಾರೆ. ಅತೀ ಮುಖ್ಯವಾಗಿ ಸದರಿ ಖರೀದಿ ಪತ್ರವನ್ನು ಬರೆದುಕೊಟ್ಟಿರುವುದು 1 ನೇ ಪ್ರತಿವಾದಿಯವರಾಗಿರುತ್ತಾರೆ. ಅವರು ನ್ಯಾಯಾಲಯದಲ್ಲಿ ಹಾಜರಾಗಿ ಮೌಖಿಕ ಸಾಕ್ಷ್ಯವನ್ನು ನೀಡಿ ಪಾಟೀ ಸವಾಲಿಗೆ ಒಳಪಡಿಸಿಕೊಂಡಿರುವುದಿಲ್ಲ. **ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ. 114(ಜಿ)**

**ರಡಿಯಲ್ಲಿ ಹಾಜರುಪಡಿಸಬಹುದಾಗಿದ್ದ ಮತ್ತು ಹಾಜರುಪಡಿಸಿರದ ಸಾಕ್ಷ್ಯವನ್ನು ಹಾಜರುಪಡಿಸದೇ ಅದನ್ನು ತಡೆಹಿಡಿದಿರುವ ವ್ಯಕ್ತಿಗೆ ಪ್ರತಿಕೂಲವಾಗುತ್ತದೆ ಎಂದು ಇರುತ್ತದೆ.** ಪ್ರಸ್ತುತ ಪ್ರಕರಣದಲ್ಲಿ ಸಂಪೂರ್ಣವಾಗಿ ಖರೀದಿ ಪತ್ರದ ಬಗ್ಗೆ ತಿಳಿದಿರುವ 1 ನೇ ಪ್ರತಿವಾದಿಯವರು ಸಾಕ್ಷಿದಾರರಾಗಿ ಈ ಪ್ರಕರಣದಲ್ಲಿ ಸಾಕ್ಷ್ಯವನ್ನು ನುಡಿಯಬೇಕಿತ್ತು ಆದರೆ ಎಲ್ಲಾ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ 2 ನೇ ಪ್ರತಿವಾದಿಯವರನ್ನು ಸಾಕ್ಷಿದಾರರನ್ನಾಗಿ ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಸದರಿ ದಾವಾ ಆಸ್ತಿಯ ಸ್ವಾಧೀನಕ್ಕೆ ಸಂಬಂಧಿಸಿದಂತೆ ನಿಪಿ.2 ರಲ್ಲಿ ಸ್ವಾಧೀನವನ್ನು ನೀಡಿರುವ ಬಗ್ಗೆ ನಮೂದಿಸಿರುತ್ತಾರೆ. ಆದರೆ ಸದರಿ ಸ್ವಾಧೀನದ ಬಗ್ಗೆ ವಾದಿ ಸಾಕ್ಷಿ 2 ಮತ್ತು 4 ರವರನ್ನು ಪಾಟೀ ಸವಾಲಿನಲ್ಲಿ ಕೇಳಿದಾಗ ವಾದಿಯವರು ಹಿರೇಹಾಳ ಗ್ರಾಮದಲ್ಲಿ ವಾಸವಾಗಿರುವುದಿಲ್ಲ. ಧಾರವಾಡದಲ್ಲಿ ವಾಸವಾಗಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಹಾಗೆಯೇ ಖರೀದಿ ಪತ್ರಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯವರು ವಾದಿ ಸಾಕ್ಷಿ 1, 2 ಮತ್ತು 4 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದರು ಸಹ ಪ್ರತಿವಾದಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಉತ್ತರವನ್ನು ಪಡೆದುಕೊಂಡಿರುವುದಿಲ್ಲ. ವಾದಿ ಸಾಕ್ಷಿ 2 ಮತ್ತು 3 ರವರು ಸಂಪೂರ್ಣವಾಗಿ ಖರೀದಿ ಪತ್ರಕ್ಕೆ ಸಂಬಂಧಿಸಿದಂತೆ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸ್ವಾಧೀನಕ್ಕೆ ಸಂಬಂಧಿಸಿದಂತೆ ವಾದಿ ಸಾಕ್ಷಿ 2 ಮತ್ತು 3 ರವರು ವಾದಿಯವರು ಸ್ವಾಧೀನದಲ್ಲಿ ಇರುವುದಿಲ್ಲ ಎಂದು ಒಪ್ಪಿಕೊಂಡಿದ್ದರು ಸಹ ಪ್ರತಿವಾದಿಯವರು ಯಾವ ಆಧಾರದ ಮೇಲೆ ಸ್ವಾಧೀನದಲ್ಲಿ ಇರುತ್ತೇವೆ ಎನ್ನುವ

ಸಂಗತಿಯನ್ನು ಹೇಳಿರುವುದಿಲ್ಲ. ಪ್ರತಿವಾದಿಯವರೇ ಸ್ವಾಧೀನದಲ್ಲಿ ಇರುತ್ತಾರೆ ಎನ್ನುವ ಸಂಗತಿಯನ್ನು ಸಾಬೀತುಪಡಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ ಸಾಕ್ಷಿ 1 ರವರನ್ನು ಹೊರತುಪಡಿಸಿ 1 ನೇ ಪ್ರತಿವಾದಿಯವರೇ ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ. ಹಾಗೇನಾದರೂ ಪ್ರತಿವಾದಿಯವರು ಸ್ವಾಧೀನದಲ್ಲಿ ಇದ್ದಿದ್ದೇ ಆದಲ್ಲಿ ಸ್ವಾಧೀನವನ್ನು ತೋರಿಸಲು ದಾಖಲಾತಿಗಳನ್ನು ಹಾಜರು ಮಾಡಬೇಕಾಗಿತ್ತು. ಆದರೆ ಅಂತಹ ಯಾವುದೇ ಪ್ರಯತ್ನವನ್ನು ಪ್ರತಿವಾದಿಯವರು ಮಾಡಿರುವುದಿಲ್ಲ. ವಾದಿ ಸಾಕ್ಷಿ 2 ಮತ್ತು 4 ರವರು ಸ್ವಾಧೀನಕ್ಕೆ ಸಂಬಂಧಿಸಿದಂತೆ ಒಪ್ಪಿಕೊಂಡ ಸಂಗತಿಗಳ ಆಧಾರದ ಮೇಲೆ ವಾದಿಯವರು ಕೇಳಿರುವ ಪರಿಹಾರವನ್ನು ನಿರಾಕರಿಸಲು ಬರುವುದಿಲ್ಲ. ಈ ಎಲ್ಲಾ ಸಂಗತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ದಿನಾಂಕ 25.02.2011 ರ ಖರೀದಿ ಪತ್ರದ ಆಧಾರದ ಮೇಲೆ ವಿಪಿಸಿ ನಂ.1445 ರ ಸಂಪೂರ್ಣ ಮಾಲೀಕರಾಗಿ ಸ್ವಾಧೀನದಲ್ಲಿ ಇರುತ್ತಾರೆ ಎನ್ನುವುದು ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ವಾದಿಯವರು ದಾವಾ ಆಸ್ತಿಯ ಮಾಲೀಕನಾಗಿರುತ್ತೇನೆ ಎನ್ನುವ ಸಂಗತಿಯನ್ನು ಸಾಬೀತುಪಡಿಸಲು ಸಫಲರಾಗಿರುತ್ತಾರೆ. ಈ ಮೇಲ್ಕಂಡ ಎಲ್ಲಾ ಸಂಗತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ನೋಡಿದಾಗ ವಾದಿಯವರು ದಾವಾ ಆಸ್ತಿಯ ಮಾಲೀಕರಾಗಿದ್ದುಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎನ್ನುವುದು ಮತ್ತು ಸರ್ವೆನಂ.443/7 ಮತ್ತು ವಿಪಿಸಿ ನಂ.1445 ಒಂದೇ ಆಗಿರುತ್ತದೆ

ಎಂದು ಸಾಬೀತುಪಡಿಸಲು ಸಫಲರಾಗಿರುತ್ತಾರೆ. ಹಾಗಾಗಿ ವಿವಾದಾಂಶ ಸಂಖ್ಯೆ 1 ಮತ್ತು 2 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

16. **ವಿವಾದಾಂಶ ಸಂಖ್ಯೆ 3ಃ**- ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ವಾದಿಯವರು ತನ್ನ ವಾದ ಪತ್ರದಲ್ಲಿ ತನ್ನ ಶಾಂತಿಯುತ ಸ್ವಾಧೀನಕ್ಕೆ ಪ್ರತಿವಾದಿಯವರು ಅಡ್ಡಿಪಡಿಸುತ್ತಿದ್ದಾರೆ ಎಂದು ಹೇಳಿರುತ್ತಾರೆ. ಸದರಿ ಸಂಗತಿಗೆ ಸಂಬಂಧಿಸಿದಂತೆ ಪ್ರತಿವಾದಿಯವರು ತಮ್ಮ ಪ್ರತಿವಾದ ಪತ್ರದಲ್ಲಿ ಮತ್ತು ಪ್ರತಿವಾದಿ ಸಾಕ್ಷಿ 1 ರವರು ಖರೀದಿ ಪತ್ರವಾಗಿರುವುದಕ್ಕೆ ಸಂಬಂಧಿಸಿದಂತೆ ಸಂಪೂರ್ಣವಾಗಿ ಅಲ್ಲಗಳೆದಿದ್ದು ಮತ್ತು ತಮ್ಮ ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ವಾದಿಯವರ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತಾರೆ ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಅದೇ ರೀತಿಯಾಗಿ ಈಗಾಗಲೇ ವಾದಿಯವರು ತಾನು ದಾವಾ ಆಸ್ತಿಯ ಮಾಲೀಕನಾಗಿದ್ದುಕೊಂಡು ಸ್ವಾಧೀನದಲ್ಲಿ ಇರುತ್ತೇನೆ ಎನ್ನುವ ಸಂಗತಿಯನ್ನು ಸಾಬೀತುಪಡಿಸಿರುತ್ತಾರೆ. ಈ ಮೇಲ್ಕಂಡ ಎಲ್ಲಾ ಚರ್ಚೆಗಳ ಆಧಾರದ ಮೇಲೆ ವಿವಾದಾಂಶ ಸಂಖ್ಯೆ 3 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

17. **ವಿವಾದಾಂಶ ಸಂಖ್ಯೆ 4ಃ**- ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ವಾದಿಯವರು ದಾವಾ ಆಸ್ತಿಯ ಮಾಲೀಕರಾಗಿರುತ್ತೆವೆ ಎಂದು ಮತ್ತು ಪ್ರತಿವಾದಿಯವರು ತಮಗೆ ಅಡ್ಡಿಪಡಿಸಿರುತ್ತಾರೆ ಎಂದು ಸಾಬೀತುಪಡಿಸಿರುವುದರಿಂದ ವಾದಿಯವರು ತಮ್ಮ ವಾದ

ಪತ್ರದಲ್ಲಿ ಕೇಳಿರುವ ಪರಿಹಾರವನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ. ಹಾಗಾಗಿ ವಿವಾದಾಂಶ ಸಂಖ್ಯೆ 4 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**18. ವಿವಾದಾಂಶ ಸಂಖ್ಯೆ 5ಃ–** ವಿವಾದಾಂಶ ಸಂಖ್ಯೆ 1 ರಿಂದ 4 ರಲ್ಲಿ ಮಾಡಿರುವ ಚರ್ಚೆಗಳ ಆಧಾರದ ಮೇಲೆ ಈ ನ್ಯಾಯಾಲಯ ಈ ಕೆಳಗಿನಂತೆ ಆದೇಶ ಮಾಡಿರುತ್ತದೆ.

## ಆದೇಶ

**ವಾದಿಯ ದಾವೆಯನ್ನು ವೆಚ್ಚ ಸಹಿತ ಪುರಸ್ಕರಿಸಲಾಗಿದೆ.**

**ವಾದಿಯು ದಾವಾ ಆಸ್ತಿಯ ವಿಪಿಸಿ ನಂ.1445 ರ ಮಾಲೀಕರಾಗಿರುತ್ತಾರೆ ಎಂದು ಈ ಮೂಲಕ ಘೋಷಿಸಲಾಗಿದೆ.**

**ವಾದಿಯವರ ದಾವಾ ಆಸ್ತಿಗೆ ಯಾವುದೇ ಹಸ್ತಕ್ಷೇಪ ಮಾಡದಂತೆ ಪ್ರತಿವಾದಿಗಳು, ಅವರ ನಂಬುಗೆಯ, ಅನುಯಾಯಿಗಳು, ಸಹಾಯಕಾರರು, ಕೆಲಸಗಾರರು ಅಥವಾ ಅವರ ಪರವಾಗಿ ನಡೆದುಕೊಳ್ಳುವವರ ವಿರುಧ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮತ್ತು ವಾದಿಯರ ಪರವಾಗಿ ಶಾಶ್ವತ ನಿರ್ಬಂಧಕಾಜ್ಞೆನ್ನು ನೀಡುವ ಮುಖಾಂತರ ಸದರಿ ವ್ಯಕ್ತಿಗಳನ್ನು ಶಾಶ್ವತವಾಗಿ ನಿರ್ಬಂಧಗೊಳಿಸಲಾಗಿದೆ.**

**ತೀರ್ಪಿನಂತೆ ಡಿಕ್ರಿ ಬರೆಯಿರಿ.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ಮೇಲೆ ತಿದ್ದುಪಡಿಗಳನ್ನು ಪರಿಶೀಲಿಸಿ ದಿನಾಂಕ 17 ನೇ ಜೂನ್ 2026 ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಿದ್ದೇನೆ.)

VIJAYKUMAR N

Digitally signed by VIJAYKUMAR N
Date: 2026.06.19 16:33:17 +0530

**(ಶ್ರೀ. ವಿಜಯಕುಮಾರ. ಎನ್ )**

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ

ಜೆ.ಎಂ.ಎಫ್.ಸಿ., ರೋಣ.

## ಅನುಸೂಚಿ

**ವಾದಿಯ ಪರವಾಗಿ ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ:**

ವಾದಿ ಪರ ಸಾಕ್ಷಿ 1 – ನೀಲಪ್ಪ ಮೈ ಮಾಳಗೌಡ್ರ
ವಾದಿ ಪರ ಸಾಕ್ಷಿ 2 – ಶೇಖರಗೌಡ ಎಸ್ ಕಟ್ಟಿ
ವಾದಿ ಪರ ಸಾಕ್ಷಿ 3 – ದ್ಯಾವಪ್ಪ ಎಸ್ ಡೊಳ್ಳಿನ
ವಾದಿ ಪರ ಸಾಕ್ಷಿ 4 – ಗೋವಿಂದ ಕೆ ಹುಡೇದಮನಿ.

**ವಾದಿಗಳ ಪರವಾಗಿ ಗುರುತಿಸಲಾದ ದಾಖಲೆಗಳು :**

ನಿಪಿ–1 – ಹಿರೇಹಾಳ ಗ್ರಾಮದ ವಿಪಿಸಿ ನಂ.1445 ಜಾಗದ ಉತಾರ
ನಿಪಿ–2 – ದಿ.25.02.2011 ರ ನೊಂದಾಯಿತ ಕ್ರಯ ಪತ್ರದ ಮೂಲ ಪ್ರತಿ
ನಿಪಿ–3 – ಉಪನೋಂದಾವಣಿ ಅಧಿಕಾರಿಯಿಂದ ಪಡೆದ ನಮೂನೆ–15
ನಿಪಿ–4 – ರಶೀದಿ
ನಿಪಿ–5 – ಫಾರ್ಮ ನಂ.1(ಎ)
ನಿಪಿ–6 – ದಿ 01.01.2011 ರಿಂದ 07.09.2017 ರವೆಗಿನ ದಾವಾ ಆಸ್ತಿಯ ನಮೂನೆ 15
ನಿಪಿ–7 – ದಿ 20.02.2017 ರಂದು ಪಂಚಾಯತಿಗೆ ಸಲ್ಲಿಸಿದ ಅರ್ಜಿ
ನಿಪಿ–8 – ಹಿರೇಹಾಳ ಗ್ರಾಮದ ವಿಪಿಸಿ ನಂ.1445 ಜಾಗದ 2010–11 ನೇ ಸಾಲಿನ ಉತಾರ
ನಿಪಿ–9 – ದಿ.09.01.2013 ರ ಹಿರೇಹಾಳ ಗ್ರಾಮದ ವಿಪಿಸಿ ನಂ.1445 ಜಾಗದ ಉತಾರ
ನಿಪಿ–10 – ಹಿರೇಹಾಳ ಗ್ರಾಮದ ವಿಪಿಸಿ ನಂ.1445 ಜಾಗದ 2016–17 ರ ಸಾಲಿನ ಉತಾರ
ನಿಪಿ–11–15 – 5 ಕಂದಾಯ ಪಾವತಿ ರಶೀದಿಗಳು
ನಿಪಿ–16 – ದಿ.29.06.2010 ರ ಗ್ರಾಮ ಸಭಯಲ್ಲಾದ ಠರಾವಿನ ಗುರುತಿನ ಪ್ರತಿ

ನಿಪಿ–17 – ದಿ.05.04.2011 ರ ಗ್ರಾಮ ಸಭೆಯಲ್ಲಾದ ಠರಾವಿನ ಗುರುತಿನ ಪ್ರತಿ

ನಿಪಿ–18 – ಸರ್ವೆನಂಬರ್ 443/7 ರ ಪಹಣಿ ಪತ್ರಿಕೆ

ನಿಪಿ–19 – ಭೂ ಆಕಾರಣೆಯಾದಿ

ನಿಪಿ–20 – ಖರೀದಿ ಪತ್ರ.

**ಪ್ರತಿವಾದಿಯ ಪರವಾಗಿ ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ :**

ಪ್ರತಿವಾದಿ ಪರ ಸಾಕ್ಷಿ 1– ಕುಸಮವ್ವ ರೋಖಡೆ.

**ಪ್ರತಿವಾದಿಗಳ ಪರವಾಗಿ ಗುರುತಿಸಲಾದ ದಾಖಲೆಗಳು :**

–ಇಲ್ಲಾ–

VIJAYKUMAR N

Digitally signed by VIJAYKUMAR N
Date: 2026.06.19 16:33:31 +0530

**ಹೆಚ್ಚುವರಿ ದಿವಾಣಿ ನ್ಯಾಯಧೀಶರು ಹಾಗೂ**

**ಜೆ.ಎಂ.ಎಫ್.ಸಿ., ರೋಣ.**